## 10

# ಉಪಯೋಗ, ನಿರುಪಯೋಗ, ದುರುಪಯೋಗ, ದುರ್ವಿನಿಯೋಗ

ಯೋನತಾನನು ಹಳೇ ಒಡಂಬಡಿಕೆಯ ನನ್ನ ನಾಯಕರಲ್ಲಿ ಒಬ್ಬನಾಗಿದ್ದಾನೆ. ಅವನೂ, ಸಹ "ತನ್ನ ಕುರಿಯ ತುಪ್ಪಟವನ್ನು ಹೊರಗೆ ಹಾಕಿದನು." ನಮ್ಮ ಕಥೆಯು 1 ಸಮುವೇಲ 14ರಲ್ಲಿ ಇರುತ್ತದೆ. ಅರಸ ಸೌಲನು ಪಾಪಮಾಡಿದ್ದನು. ಅವನ ಸೇವೆಯು ಕೆಟ್ಟದ್ದರಿಂದ ಹೆಚ್ಚು ಕೆಟ್ಟದ್ದಕ್ಕೆ ಹೋಗುತ್ತಿತ್ತು. ಆದಾಗ್ಯೂ ಅವನಿಗೆ ನಂಬಿಗಸ್ತ, ಬಲಶಾಲಿಯಾದ ಮಗ ಯೋನಾತಾನನು ಇದ್ದನು. ಫಿಲಿಷ್ಟಿಯರ ನಿಯಂತ್ರಣದಲ್ಲಿದ್ದರು. ಖಡ್ಗಗಳನ್ನು ಮಾಡಬಾರದೆಂದು ಯಾವುದೇ ಕುಮ್ಮಾರನಿಗೆ ಇಸ್ರಾಯೇಲಿನಲ್ಲಿರಲು ಅಪ್ಪಣೆಯಿರಲಿಲ್ಲ. ಸೈನ್ಯವು ಕೇವಲ ಗುದ್ದಲಿ, ಸಲಿಕೆಗಳನ್ನು ಮಾತ್ರವೇ ತಿಳಿದಿತ್ತು. ಕೇವಲ ಅರಸ ಸೌಲ ಮತ್ತು ಯೋನಾತಾನರಲ್ಲಿ ಬಾಣಗಳೂ ಖಡ್ಗಗಳೂ ಇದ್ದವು, ಆದರೆ ಯೋನಾತಾನನಿಗೆ ದೇವರಲ್ಲಿ ನಂಬಿಕೆಯಿತ್ತು. ಅವನು ತನ್ನ ಆಯುಧಗಳನ್ನು ಹೊರುವವನಿಗೆ ತನ್ನೊಂದಿಗೆ, ಸುನ್ನತಿಯಿಲ್ಲದ ಫಿಲಿಷ್ಟಿಯರನ್ನು "ಹೊಡೆಯುವದಕ್ಕೆ" ಬರಬೇಕೆಂದು ಆಜ್ಞಾಪಿಸಿದನು. (ಅವನು ಎಷ್ಟು ಭಾವೋದ್ವೇಗವುಳ್ಳವನಾಗಿದ್ದನು ಎಂಬುದನ್ನು ಊಹಿಸಿರಿ!) ಅವರು ಬಹು ಸಂಖ್ಯೆಯಲ್ಲಿದ್ದರು. ಆದರೆ, ಪರಿಸ್ಥಿತಿಗಳು ಸರಿಯಾಗಿದ್ದವು! ಯೋನತಾನನು "ತನ್ನ ಕುರಿಯ ತುಪ್ಪಟವನ್ನು ಹೇಗೆ ಹೊರಗಿಟ್ಟನು"? "ಬಹು ಸಂಖ್ಯೆಯಲ್ಲಿರುವ ವೈರಿಯು ಒಂದೇ ಖಡ್ಗದಿಂದ ಮೇಲಕ್ಕೆ ಹತ್ತಿಬಾ ಎಂದು ಕರೆದರೆ, ಆಗ ಅದು ದೇವರ ಜಯದ ಸಂಕೇತವಾಗಿರುವುದು" ಎಂದು ಅವನು ತನ್ನ ಆಯುಧ ಹೊರುವವನಿಗೆ ಹೇಳಿದನು. ನಾವು ಕುರಿಯ ತುಪ್ಪಟವನ್ನು ಹಾಕುವ ಮಾರ್ಗವು ಇದಾಗಿದೆಯೋ? ಫಿಲಿಷ್ಟಿಯರು ಸಂತೋಷದಿಂದ ಒಪ್ಪಿಕೊಂಡರು. ಇಪ್ಪತ್ತು ಜನರನ್ನು ಕೊಲ್ಲಲು ಯೋನತಾನನು "ಕೈಕಾಲುಗಳಿಂದ" ಮೇಲಕ್ಕೆ ಏರಿದನು. ಭೂಮಿಯು ಕಂಪಿಸಿತು ಮತ್ತು ಫಿಲಿಷ್ಟಿಯರು ನಡುಗಿದರು! ದೇವರಿಗಾಗಿ ಮಹಾಜಯವನ್ನು ಯೋನತಾನನು ಆನಂದಿಸಿದನು.

1 ಸಮುವೇಲ 14ರಿಂದ ನಾವು ಪ್ರಾರ್ಥನೆಯ ಅಪ್ರಯೋಗ, ದುರುಪಯೋಗ ಮತ್ತು ತಪ್ಪು ಉಪಯೋಗವನ್ನು ಮತ್ತು ಪ್ರಾರ್ಥನೆಯ ಪರಿಶುದ್ಧ ಬರಹದ ಉಪಯೋಗವನ್ನು ಗಮನಿಸಬಹುದು. ಮೊದಲು, ನಾವು ಪ್ರಾರ್ಥನೆಯ *ಅಪ್ರಯೋಗವನ್ನು* ಯೋಚಿಸೋಣ. ನಾಯಕರು ಪ್ರಾರ್ಥನೆಯಿಂದ ಮಾತ್ರವೇ ಆಯ್ಕೆ ಮಾಡಲ್ಪಡಬಾರದು, ಆದಾಗ್ಯೂ ಪ್ರಾರ್ಥನೆಯಿಲ್ಲದೇ ಅವರು ಆಯ್ಕೆಮಾಡಲ್ಪಡಬಾರದು. ನಾಯಕರು ಆಯ್ದುಕೊಳ್ಳಲ್ಪಡುವಾಗ ಮತ್ತು ಪ್ರಸಂಗಿಗಳು ಆಯ್ಕೆಮಾಡಿಕೊಳ್ಳಲ್ಪಡುವಾಗ ಸಾಮಾನ್ಯವಾಗಿ ಆ ಸಮಯಗಳು ಗಲಿಬಿಲಿಯಿಂದ ತುಂಬಿರುತ್ತವೆ. ಯಾಕೆ? ಯಾಕಂದರೆ ದೇವರ ಬದಲು ರಾಜಕೀಯ ಮತ್ತು ತಪ್ಪಾದ ಪ್ರಮಾಣಗಳು ಪ್ರಬಲವಾಗಿರುತ್ತವೆ. ಅಪೊಸ್ತಲರ ಕೃತ್ಯಗಳು 1ರಲ್ಲಿ ಯೂದನ ಸ್ಥಳದಲ್ಲಿ ಮತ್ತೊಬ್ಬನನ್ನು ಆಯ್ಕೆ ಮಾಡುವ ವಿಷಯದಲ್ಲಿ ಪೇತ್ರನು ದೃಢತೆಯುಳ್ಳವನಾಗಿದ್ದನು. ಮನುಷ್ಯನು ಅರ್ಹತೆಯುಳ್ಳವನಾಗಿರಬೇಕಿತ್ತು. ಇಬ್ಬರು ಅರ್ಹತೆಯುಳ್ಳವರಾದರು. ಆಗ ದೇವರು ತೀರ್ಮಾನ ಮಾಡಿದನು. ಮಿಶನರಿ ಗುಂಪು ಪ್ರಾರ್ಥನೆ ಮತ್ತು ಉಪವಾಸ ಮಾಡುವದರಲ್ಲಿ ಆಯ್ಕ ಮಾಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 13:1-3). ಹಿರಿಯರು ಅನಂತರ ಪ್ರಾರ್ಥನೆಯಿಂದ ಹಾಗೂ ಉಪವಾಸ ಮಾಡುವದರಿಂದ ಪ್ರತಿಷ್ಠಿಸಲ್ಪಟ್ಟರು

(ಅಪೊಸ್ತಲರ ಕೃತ್ಯಗಳು 14:23). *ಮೊದಲು ಪ್ರಾರ್ಥಿಸಿರಿ!* ಸಮಯಗಳು ಕಠಿಣವಾದ ವುಗಳಾಗಿರುವಾಗ, ಸಭಾನಾಯಕರು ಪ್ರಾರ್ಥಿಸುವುದು ಅಗತ್ಯವಾಗಿರುವದನ್ನು ಕಂಡುಕೊಳ್ಳುತ್ತಾರೆ. ಆಗ ಯಶಸ್ಸು ಬರುತ್ತದೆ. ಆಗ, ಪ್ರಾರ್ಥನೆಯನ್ನು ಮರೆಯುವುದು ಹಾಗೂ ಕಡೆಗಣಿಸುವುದು ಸುಲಭವಾಗುತ್ತದೆ. *ಪ್ರಾರ್ಥನೆಯಲ್ಲಿಯ* ಅಗತ್ಯತೆಗಳು ಬದಲಾಗಬಹುದು, ಆದರೆ ಪ್ರಾರ್ಥನೆಗಾಗಿ *ಅಗತ್ಯತೆಯು ಬದಲಾಗುವದಿಲ್ಲ!* ಯಾವುದೇ ಸಭೆ; ಯಾವುದೇ ನಾಯಕನು, ಪ್ರಾರ್ಥನೆಗಾಗಿ ಅಗಾಧವಾದ ಅಗತ್ಯತೆಯನ್ನು ಮೀರಿ ಬೆಳೆಯುವುದಿಲ್ಲ. ಯೋನಾತಾನನು ತನ್ನಿಂದಲೇ ಅಲ್ಲ - ಆದರೆ ದೇವರ ಕಾರಣದಿಂದ ಜಯಶಾಲಿಯಾದನು. *ಮೊದಲು ಪ್ರಾರ್ಥಿಸಿರಿ!*

ಎರಡನೆಯದು, ಪ್ರಾರ್ಥನೆಯನ್ನು *ತಪ್ಪಾಗಿ ಬಳಸುವದನ್ನು* ಪರೀಕ್ಷಿಸೋಣ. ಯೋನತಾನನು ಅಪರಾಧಿಯಾಗಿದ್ದನೋ? ಯಾಕಂದರೆ ಫಿಲಿಷ್ಟಿಯರು ಸೋಲಿ ಸಲ್ಪಡಬೇಕೆಂದು ದೇವರು ಬಯಸಿದ್ದನು. ಯೋನತಾನನಲ್ಲಿ ರಹಸ್ಯ ಕಾರ್ಯಸೂಚಿ ಇರಲಿಲ್ಲ; ಅವನಲ್ಲಿ ಸ್ವಂತ ಯೋಜನೆಯಿರಲಿಲ್ಲ; ಅವನು ವೈಯಕ್ತಿಕ ಪ್ರಸಿದ್ಧಿಯನ್ನು ಹುಡುಕಲಿಲ್ಲ. ಅವನು ದೇವರ ಮಹಿಮೆಯಲ್ಲಿ ರೋಮಾಂಚನಗೊಂಡನು. ಹೀಗಿದ್ದರೂ, ಪ್ರಾರ್ಥನೆಯನ್ನು ತಪ್ಪಾಗಿ ಉಪಯೋಗಿಸುವುದು ಸುಲಭವಾಗಿದೆ. ಪ್ರಾರ್ಥನೆಯು ತಪ್ಪಾಗಿ, ಮೋಸಕರವಾದ ಉದ್ದೇಶಕ್ಕಾಗಿ ಉಪಯೋಗಿಸಲ್ಪಡಬಾರದು. ಒಬ್ಬ ಪ್ರಸಂಗಿಯು ಒಂದು ಯೋಜನೆಯನ್ನು ಮುಂದಿಟ್ಟು, ಪ್ರಾರ್ಥನೆಯೊಂದಿಗೆ ಜನರನ್ನು ದುರುಪಯೋಗಪಡಿಸಿಕೊಳ್ಳಬಾರದು. ಪ್ರಸಂಗಿಯು ತಾನು ಪ್ರಸಂಗಿಸುತ್ತಿರುವಂತೆ ಸದಸ್ಯರನ್ನು ಪ್ರಾರ್ಥಿಸಲು ಕೇಳಿಕೊಳ್ಳಬಾರದು - ಅವರು ಕೇಳುವಂತೆ ಹೇಳಬೇಕು. ಪ್ರಸಂಗಿಯು ಪ್ರಾರ್ಥಿಸತಕ್ಕದ್ದು, ಆದರೆ ಅವನ ಪ್ರಸಂಗಗಳು ಸಿದ್ಧತೆಯಿಲ್ಲದೆ ಇನ್ನೂ ಸೋತು ಹೋಗುವವು. ಪ್ರಸಂಗಗಳು ಪ್ರಾರ್ಥನೆಯಲ್ಲಿ ಆಳವಾಗಿರಬೇಕು ಮತ್ತು ಅಧ್ಯಯನದಿಂದ ಬೆಳಸಲ್ಪಡಬೇಕು. ತಿಳಿಯಲು ಅಧ್ಯಯನ ಮಾಡಿರಿ; ಬಲಕ್ಕಾಗಿ ಪ್ರಾರ್ಥಿಸಿರಿ. ವಿಳಂಬ ಮಾಡಲು ಪ್ರಾರ್ಥನೆಯು ಒಂದು ಭಕ್ತಿಯ ಮಾರ್ಗವಾಗಿರುವದಿಲ್ಲ. ಕಾರ್ಯಮಾಡಲು ಒಂದು ಸಮಯವಿರುವುದು. ಪ್ರಾರ್ಥನೆಯು ಅಸಾಮರ್ಥ್ಯಕ್ಕಾಗಿ ಪರ್ಯಾಯವಾಗಿರಲಾರದು.

ಮೂರನೆಯದು, ಪ್ರಾರ್ಥನೆಯ *ದುರುಪಯೋಗದ* ಕಡೆಗೆ ನೋಡೋಣ. ತಪ್ಪಾಗಿ ಉಪಯೋಗಿಸುವುದು ದುರುಪಯೋಗದಿಂದ ಭಿನ್ನವಾಗಿರುತ್ತದೆ. ತಪ್ಪಾಗಿ ಉಪಯೋ ಗಿಸುವುದು ಅಜ್ಞಾನದಿಂದ ಬರುತ್ತದೆ; ದುರುಪಯೋಗವು ಸ್ವಾರ್ಥದಿಂದ ಬರುತ್ತದೆ. ಎರಡೂ ಹಾಳು ಮಾಡುತ್ತವೆ. ದುರುಪಯೋಗವು ದೇವರು ನಮ್ಮ ಯೋಜನೆಗಳನ್ನು ಆಶೀರ್ವದಿಸಲಿ ಎಂದು ಹಕ್ಕಿನಿಂದ ಕೇಳುವುದು ಆಗಿರುತ್ತದೆ. ದುರುಪಯೋಗವು ನಮ್ಮ ಸ್ವಂತ ಸುಖವನ್ನು ಮತ್ತು ಗೌರವವನ್ನು ಹುಡುಕುವುದಾಗಿದೆ. "ಮನುಷ್ಯನನ್ನು ಒಳ್ಳೆಯವನ ಹಾಗೆ ಕಾಣುವಂತೆ" ಮಾಡುವ ಉದ್ದೇಶಕ್ಕೆ ಪ್ರಾರ್ಥನೆಯು ಎಂದೂ ಇರಲಿಲ್ಲ. ಪ್ರಾರ್ಥನೆಯು ಯೋಚಿಸುವದಕ್ಕೆ, ಪ್ರಯತ್ನಕ್ಕೆ, ಅರ್ಹ ನಾಯಕತ್ವಕ್ಕೆ, ಇಲ್ಲವೇ ಉದಾರತೆಗೆ ಪರ್ಯಾಯವಾಗಿರುವದಿಲ್ಲ. ಜವಾಬ್ದಾರಿಕೆಯಿಲ್ಲದ ಹಣಕಾಸಿನ ವ್ಯವಹಾರವನ್ನು ಇಲ್ಲವೇ ವೈಯಕ್ತಿಕ ಗೌರವವನ್ನು ಎದುರಿಸಲು ಪ್ರಾರ್ಥನೆಯನ್ನು ಎಂದೂ ಉಪಯೋಗಿಸಬಾರದು. ನಾಯಕರು ತಾವು ಮಾಡಲಾರದಂಥದ್ದನ್ನು ಮಾಡಲು ದೇವರಿಗೆ ಪ್ರಾರ್ಥಿಸತಕ್ಕದ್ದಲ್ಲ. ಯೇಸುವು ಇನ್ನೂ, "ಸಭೆಯ ಶಿರಸ್ಸು" ಆಗಿದ್ದಾನೆ (ಎಫೆಸ 1:22, 23; ಕೊಲೊಸ್ಸೆ 1:17-19). ದೇಹವು (ಸಭೆಯು) ಶಿರಸ್ಸಿನ ಕೆಳಗಿರುತ್ತದೆ. ಇದು ಕ್ರೈಸ್ತತ್ವದಲ್ಲಿ ಅಸ್ತಿವಾರದ ತತ್ವವಾಗಿದೆ. ಶಿರಸ್ಸು ದೇಹವನ್ನು ಚಲಿಸುತ್ತದೆ. ಶಿರಸ್ಸು ದೇಹವನ್ನು ಬಲಗೊಳಿಸುತ್ತದೆ.

ನಾಲ್ಕನೆಯದು, 1 ಸಮುವೇಲ 14ರಲ್ಲಿ, ಪ್ರಾರ್ಥನೆಯ *ಪರಿಶುದ್ಧ ಬರಹದ ಉಪಯೋಗವನ್ನು* ನೋಡೋಣ. ಪ್ರಾರ್ಥನೆಯು ಹುಚ್ಚು ಧೈರ್ಯದ್ದಾಗಿರಬಹುದು! ದೇವರ ಚಿತ್ತದಲ್ಲಿ ಇರುವಂಥದ್ದು ಮನುಷ್ಯರನ್ನು ಅಜೇಯರನ್ನಾಗಿ ಮಾಡುತ್ತದೆ! ಯೋನತಾನನು, ಎಲ್ಲ ಆತಂಕಗಳಿಗೆ ವಿರುದ್ಧವಾಗಿ ಮೇಲಕ್ಕೆ ನೋಡಿದನು. "ನಮ್ಮ ವೈರಿಗಳು ದೇವರು ಅವರು ಎಲ್ಲಿರಬೇಕೆಂದು ಬಯಸುವನೋ ಅಲ್ಲಿಯೇ ಇದ್ದಾರೆ" ಎಂದು ಹೇಳಿದನು! *ಮೊದಲು ಪ್ರಾರ್ಥಿಸಿರಿ!*

◇◇◇◇◇◇◇◇

# ಪ್ರಾರ್ಥಿಸುವ ಕ್ರಿಸ್ತನು

## ಯೋಹಾನ 17:1-26

*"ಆತನಾದರೋ ಅರಣ್ಯ ಪ್ರದೇಶಗಳಿಗೆ ಹೋಗಿ ದೇವರ ಪ್ರಾರ್ಥನೆಯನ್ನು ಮಾಡುತ್ತಿದ್ದನು" (ಲೂಕ 5:16).*

ಪ್ರಾರ್ಥನೆಯು ದೇವರು ಬಲವುಳ್ಳವನಾಗಿರುವಂತೆ ಬಲವುಳ್ಳದ್ದಾಗಿದೆ, ಯಾಕಂದರೆ ಆತನು ಅದಕ್ಕೆ ಉತ್ತರಕೊಡಲು ವಾಗ್ದಾನಮಾಡಿದ್ದಾನೆ. ಪ್ರಾರ್ಥನೆಯ ಮಿತಿಗಳು ದೇವರ ಚಿತ್ತದ ಮತ್ತು ಬಲದ ಮಿತಿಗಳಾಗಿರುತ್ತವೆ. ಯೇಸುವು ಈ ಸತ್ಯವನ್ನು ನಂಬಿದನು ಮತ್ತು ರೂಢಿಸಿದನು. ಲಾಜರನ ಸಮಾಧಿಯ ಬಳಿಯಲ್ಲಿ, ಯೇಸುವು ಪ್ರಾರ್ಥನೆಯ ತನ್ನ ಜೀವಿತವನ್ನು ಘೋಷಿಸಿದನು. ಯೋಹಾನ 11:41-43 ಹೀಗೆ ಹೇಳುತ್ತದೆ,

> ಆಗ ಕಲ್ಲನ್ನು ತೆಗೆದು ಹಾಕಿದರು. ಮತ್ತು ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ - ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ; ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ; ಆದರೂ ನೀನೇ ನನ್ನನ್ನು ಕಳುಹಿಸಿಕೊಟ್ಟಿ ಎಂದು ಸುತ್ತಲು ನಿಂತಿರುವ ಜನರು ನಂಬುವಂತೆ ಅವರಿಗೋಸ್ಕರ ಈ ಮಾತುಗಳ ನ್ನಾಡಿದೆನೆಂದು ಹೇಳಿದನು. ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ - "ಲಾಜರನೇ, ಹೊರಗೆ ಬಾ" ಎಂದು ಕೂಗಿದನು.

*ಪ್ರಾರ್ಥಿಸುವ ಕ್ರಿಸ್ತನು!* ಪ್ರಾರ್ಥಿಸುವ ದೇವರು! *ಆಕರ್ಷಣೆ!* ಯೇಸುವು "ಮನುಷ್ಯನಲ್ಲಿ ದೇವರು," ಅಳತೆಯಿಲ್ಲದೆ ಆತ್ಮವಿದ್ದವನು (ಯೋಹಾನ 1:1, 14-17; 3:34), ಆದಾಗ್ಯೂ *ಆತನಿಗೆ ಪ್ರಾರ್ಥನೆಯ ಅವಶ್ಯಕತೆಯಿತ್ತು*! ಜೀವಿಸಿದ ಯಾವನೇ ಒಬ್ಬನಿಗಿಂತ ಹೆಚ್ಚಾಗಿ ಆತನು ಪ್ರಾರ್ಥಿಸಿದನು. ಕ್ರಿಸ್ತನ ಜೀವನದಲ್ಲಿ ಪ್ರಾರ್ಥನೆಗಿದ್ದ ಪ್ರಾಮುಖ್ಯತೆ ಮತ್ತು ಸ್ಥಾನವನ್ನು ನೋಡುವುದು ಆಶ್ಚರ್ಯಕರವಾದದ್ದಾಗಿದೆ.

ಕೆಲವೊಂದು ಪಟ್ಟುಬಿಡದ ಸಂಗತಿಗಳು ಹೊರಟು ಹೋಗುವದಿಲ್ಲ. ಯೇಸುವು ನಿಜವಾಗಿಯೂ ಪ್ರಾರ್ಥನೆಯ ಬಗ್ಗೆ ಸ್ವಲ್ಪವಾಗಿ ಬೋಧಿಸಿದನು - ಅತಿ ದೊಡ್ಡ ಬೋಧನೆಯು, ಅಪೊಸ್ತಲರು ಹೇಗೆ ಪ್ರಾರ್ಥಿಸಬೇಕೆಂಬುದನ್ನು ಕಲಿಸು ಎಂದು ಕೇಳಿಕೊಂಡಾಗ, ಲೂಕ 11ರಲ್ಲಿ ದಾಖಲೆ ಮಾಡಲ್ಪಟ್ಟಿದೆ. ಯೇಸುವು ಸಹ ನಕಾರಾತ್ಮಕ ಪ್ರಸಂಗಿಸುವಿಕೆಯಲ್ಲಿ ತೊಡಗಿದ್ದನು (ಮತ್ತಾಯ 6:5-8). ಪ್ರಾರ್ಥನೆಯ ದುರುಪಯೋಗದ ಬಗ್ಗೆ ಆತನು

ಎಚ್ಚರಿಸಿದನು: ಮೊದಲನೆಯದು, ನಾವು ಕಪಟಿ ಗಳಂತೆ ಪ್ರಾರ್ಥಿಸಬಹದು (ವಚನ 5), ಮತ್ತು ಎರಡನೆಯದು, ಅನ್ಯರಂತೆ ನಾವು ಪ್ರಾರ್ಥಿಸಬಹುದು ("ಅಜ್ಞಾನಿಗಳು"; ವಚನ 7). ಯೇಸುವು ಪ್ರಾರ್ಥನೆಯನ್ನು ಕುರಿತ "ಮೃದುವಾದ" ಭಾವನೆಯುಳ್ಳವನಾಗಿದ್ದನು. ನಮಗೆ ನಮ್ಮ ಸ್ವಂತ "ಪ್ರಾರ್ಥನಾ ಕೋಣೆಗಳು" ಇರಬೇಕೆಂದು ಸಲಹೆ ಮಾಡಿದನು. ಪ್ರತ್ಯೇಕವಾಗಿ (ಅಂತರಂಗದಲ್ಲಿ) ಹೇಳಲ್ಪಟ್ಟ ಪ್ರಾರ್ಥನೆಗಳು ಬಹಿರಂಗವಾಗಿ ಬಹುಮಾನಿಸಲ್ಪಡುವವು ಎಂದು ಯೇಸು ಹೇಳಿದನು. ಗರ್ವಿಗಳ ಮತ್ತು ತೋರಿಕೆಯ ಪ್ರಾರ್ಥನೆಗಳನ್ನು ಯೇಸುವು ಖಂಡಿಸಿದನು. ಗೆತ್ಸೆಮನೆಯಲ್ಲಿ ತನ್ನೊಂದಿಗೆ ಪ್ರಾರ್ಥನೆಯಲ್ಲಿ ಪ್ರವೇಶಿಸಬೇಕೆಂದು ಯೇಸುವು ಪೇತ್ರ, ಯಾಕೋಬ ಮತ್ತು ಯೋಹಾನನನ್ನು ಆಹ್ವಾನಿಸಿದಾಗ, ಆತನು ಅವರಿಂದ ಒಂದು ಕಲ್ಲೆಸೆಯುವಿಕೆಗಿಂತ ದೂರ ಹೋದನು (ಲೂಕ 22:41). ಯೇಸುವಿಗೆ, ಪ್ರಾರ್ಥನೆಯು ಬಹಳ ವೈಯಕ್ತಿಕವಾದ ಸಂಗತಿಯಾಗಿತ್ತು.

## ಸತ್ಯಾಂಶಗಳು

ಪ್ರಾರ್ಥನೆಯ ಮೇಲಿನ ಯೇಸುವಿನ ಬೋಧನೆಯ ಬಗ್ಗೆ ಇನ್ನೂ ಹೆಚ್ಚು ಸತ್ಯಾಂಶಗಳನ್ನು ಯೋಚಿಸೋಣ. ಯೇಸುವು ಎಂದೂ ಪ್ರಾರ್ಥನಾ ಜೊತೆಗಾರರನ್ನು ನೇಮಿಸಲಿಲ್ಲ. ಒಂದಾಗಿ ಪ್ರಾರ್ಥಿಸುವುದು ಪರಿಶುದ್ಧ ಬರಹಗಳಿಗೆ ವಿರುದ್ಧವಾದದ್ದಾಗಿರುವದಿಲ್ಲ. ಮೇಲ್ವಿಚಾರಕ ಸಹೋದರನಿಗೆ ಉತ್ತರ ಕೊಡುವುದು ಪರಿಶುದ್ಧ ಬರಹಗಳಿಗೆ ವಿರುದ್ಧವಾದದ್ದಾಗಿದೆ. ಯೇಸುವಿಗೆ ಎಂದೂ "ಪ್ರಾರ್ಥನಾವೀರರು" ಇರಲಿಲ್ಲ. ಇದು "ಮೂಲಕ್ಕೆ ಹೋದ ಹುಚ್ಚುತನವಾಗಬಹುದು." ದೊಡ್ಡ ವಿವರಣೆಗಳಲ್ಲಿ ನಿರ್ದೇಶನಗಳನ್ನು ಕೊಟ್ಟು, ಆತನು ಎಪ್ಪತ್ತು ಜನರನ್ನು ಕಳುಹಿಸಿದಾಗ, ಆತನು ಪ್ರಾರ್ಥನೆಯ ಬಗ್ಗೆ ಹೇಳಲಿಲ್ಲ (ಲೂಕ 10:1-16; ನೋಡಿರಿ ಲೂಕ 9:1-6ರಲ್ಲಿ ಯೇಸುವು ಅಪೊಸ್ತಲರನ್ನು ಕಳುಹಿಸಿದನು). ಯೇಸು ಮತ್ತು ಅಪೊಸ್ತಲರೊಂದಿಗೆ, ಬೈಬಲು "ದೈನಂದಿನ ಧ್ಯಾನಗಳ" ಬಗ್ಗೆ ಏನನ್ನೂ ಹೇಳುವದಿಲ್ಲ. "ನಿಮ್ಮ ಪ್ರಾರ್ಥನಾ ಜೀವನ ಹೇಗಿರುವುದು?" "ಅದರ ಬಗ್ಗೆ ಪ್ರಾರ್ಥಿಸಿರುವಿರೋ?" ಎಂದು ಆತನು ಪರಿಶುದ್ಧ ಬರಹಗಳಲ್ಲಿ ಎಂದೂ ಕೇಳಿರುವದಿಲ್ಲ. ಸಮಸ್ಯೆಗಳಿದ್ದ ಜನರಿಗೆ "ಅದರ ಬಗ್ಗೆ ಪ್ರಾರ್ಥಿಸಿರಿ" ಎಂದು ಆತನು ಎಂದೂ ಸಲಹೆ ಮಾಡಲಿಲ್ಲ.

ಯೇಸು ಎಂದೂ ಪ್ರಾರ್ಥನೆಯನ್ನು ಪ್ರಚುರಪಡಿಸಲಿಲ್ಲ. "ವ್ಯರ್ಥವಾದ ಪುನರಾವರ್ತನೆಗಳಿಗೆ" ವಿರುದ್ಧವಾಗಿ ಎಚ್ಚರಿಸಿದನು. ಆದರೆ ಆತನು ಸತತ ಪ್ರಯತ್ನವನ್ನು ಪ್ರತಿಪಾದಿಸಿದನು. ಯೇಸುವಿನಿಂದ ಹೆಸರು ಹಿಡಿದು ಪ್ರಾರ್ಥಿಸಲ್ಪಟ್ಟವನೆಂದು ಬೈಬಲಿನಲ್ಲಿ ದಾಖಲೆಯಾದ ಒಬ್ಬನೇ ಅಪೊಸ್ತಲನು ಪೇತ್ರನಾಗಿದ್ದಾನೆ (ಲೂಕ 22:31, 32). ಯೇಸುವಿನೊಂದಿಗೆ ಎಂದೂ ನಾಟಕವಾಗಲಿ, ಪ್ರದರ್ಶನವಾಗಲೀ, ಹೊರಪ್ರದರ್ಶನವಾಗಲೀ, ಕಾದಂಬರೀಕರಿಸುವದಾಗಲೀ, ಸಂಗೀತ ಕಾರ್ಯಕ್ರಮವಾಗಲೀ ಇರಲಿಲ್ಲ. ಪ್ರಾರ್ಥನೆಯು ಯೇಸುವಿಗೆ ಅಧಿಕೃತವಾದದ್ದಾಗಿತ್ತು.

ಯೇಸುವಿನೊಂದಿಗೆ ಪ್ರಾರ್ಥನೆಯು ಪ್ರಾಧಾನ್ಯತೆಯಾಗಿದ್ದುದು *ನಿಜವಾದ ಸಂಗತಿಯಾಗಿದೆ.* ನಮ್ಮಲ್ಲಿ ಹೆಚ್ಚಾದವರಿಗೆ ಪ್ರಾರ್ಥನೆಯ ಹೋರಾಟಕ್ಕೆ ಸಿದ್ಧತೆಯಾಗಿದೆ. ಯೇಸುವಿನೊಂದಿಗೆ ಪ್ರಾರ್ಥನೆಯೇ ಹೋರಾಟವಾಗಿತ್ತು! ಕ್ರಿಸ್ತನ ಜೀವಿತದಲ್ಲಿ ಪ್ರಾರ್ಥನೆಯು ಕೆಲಸವಾಗಿತ್ತು, ಸೇವೆಯು ಬಹುಮಾನವಾಗಿತ್ತು. ರಕ್ತದಂತೆ ಸುರಿದ ಬೆವರಿನ ಹನಿಯು ಎಲ್ಲಿ ಇತ್ತು? ಗಲಿಲಾಯ ಸಮುದ್ರದ ಬಳಿಯಲ್ಲಿ *ಅಲ್ಲ,* ಪಿಲಾತನ ಅರಮನೆಯಲ್ಲಿ *ಅಲ್ಲ*, ಗೊಲ್ಗೊಥಾದಲ್ಲಿ ಅಲ್ಲ. ಗೆತ್ಸೇಮನೆಯಲ್ಲಿ ("ದ್ರಾಕ್ಷಾರಸ

ಗಾಣದಲ್ಲಿ") ಯೇಸುವು ಪ್ರಾರ್ಥನೆಯಲ್ಲಿ ಇದ್ದಾಗ, "ಬೆವರು ರಕ್ತದ ಹನಿಗಳಂತೆ ಸುರಿಯಿತು" (ಲೂಕ 22:44). ಪರೀಕ್ಷೆಯು ಬಂದಾಗ ಯೇಸುವು ಜಯಹೊಂದಿದನು, ಯಾಕಂದರೆ ಆತನು ಈ ಮೊದಲು ಪ್ರಾರ್ಥನೆಯಲ್ಲಿ ಅದನ್ನು ಸಾಧಿಸಿದ್ದನು. ದೇವರಿಗೆ ಅಧೀನರಾಗಿರಿ ... ಸಂಪೂರ್ಣವಾಗಿ ದೇವರಲ್ಲಿ ನಂಬಿಕೆಯಿಡಿರಿ ... ದೇವರಿಗೆ ಒಪ್ಪಿಸಿಕೊಳ್ಳಿರಿ. ನಾವು ಪ್ರಾರ್ಥನೆಯಲ್ಲಿ ಸೋಲುವದರಿಂದ ನಾವು ಜೀವನದಲ್ಲಿ ಸೋಲುತ್ತೇವೆ! ಯೇಸುವಿಗೆ ತಂದೆಯೊಂದಿಗಿದ್ದು ಆತನೊಂದಿಗೆ ಮಾತನಾಡುವದಕ್ಕಿಂತ ಬೇರೆ ಯಾವುದೂ ಮಹತ್ವದ್ದಾಗಿರಲಿಲ್ಲ. ತೀರ್ಮಾನವು ಕಲ್ವಾರಿಯಲ್ಲಿ ಅಲ್ಲ, ಆದರೆ ಗೆತ್ಸೇಮನೆಯಲ್ಲಿ ಮಾಡಲ್ಪಟ್ಟಿತು! ನಿಜವಾಗಿಯೂ, ಆತನು "ಪ್ರಾರ್ಥಿಸುವ ಕ್ರಿಸ್ತನು" ಆಗಿದ್ದನು.

## ಸಮಯಗಳು

ಪ್ರಾರ್ಥನೆಯು ಯೇಸುವಿಗೆ ಉಸಿರಾಡಿಸುವಷ್ಟು ಸ್ವಾಭಾವಿಕವಾಗಿತ್ತು. ಸುವಾರ್ತೆಗಳ ಬರಹಗಾರರು ಯೇಸುವಿನ ಜೀವನದಲ್ಲಿ ಪ್ರಾರ್ಥನೆಯ ಇಪ್ಪತ್ತಕ್ಕಿಂತ ಹೆಚ್ಚು ನಿದರ್ಶನಗಳನ್ನು ದಾಖಲೆ ಮಾಡಿದ್ದಾರೆ. ಆತನು ಕಾರ್ಯನಿರತನಾಗಿದ್ದನು - ಆದರೆ ಬಹಳವಾಗಿ ಕಾರ್ಯನಿರತನಾಗಿರಲಿಲ್ಲ. ಆತನು ಎಂದೂ ಆವಸರಪಡಲಿಲ್ಲ ಇಲ್ಲವೇ ಒತ್ತಡದಲ್ಲಿ ಇರಲಿಲ್ಲ. ಸುವಾರ್ತೆಗಳ ಲೇಖಕರು ನೂರಐವತ್ತಕ್ಕಿಂತ ಹೆಚ್ಚು ಸಂದರ್ಶನಗಳನ್ನು ದಾಖಲೆ ಮಾಡಿದ್ದಾರೆ - ಯೇಸುವು ಯುವಕರೊಂದಿಗೆ ಮತ್ತು ಪ್ರಾಯಸ್ಥರೊಂದಿಗೆ, ಸಣ್ಣವರೊಂದಿಗೆ ಮತ್ತು ದೊಡ್ಡವರೊಂದಿಗೆ, ಐಶ್ವರ್ಯವಂತರೊಂದಿಗೆ ಮತ್ತು ಬಡವರೊಂದಿಗೆ, ಒಳ್ಳೆಯವರೊಂದಿಗೆ ಮತ್ತು ಕೆಟ್ಟವರೊಂದಿಗೆ ಮಾತಾಡಿದನು. ಇದಕ್ಕಿಂತಲೂ ಹೆಚ್ಚಾಗಿ ಆತನ ತಾಳ್ಮೆಯು ಆಶ್ಚಯಕರವಾದದ್ದಾಗಿದೆ. ಆತನು ಪರಿಪೂರ್ಣನಾಗಿದ್ದನು, ಬಲಶಾಲಿಯಾಗಿದ್ದನು ಮತ್ತು ದಯೆಯುಳ್ಳವನಾಗಿದ್ದನು - ಆದಾಗ್ಯೂ ಎಲ್ಲರೂ ಆತನನ್ನು ಖಂಡಿಸಲು, ಟೀಕೆ ಮಾಡಲು ಇಲ್ಲವೇ ತಪ್ಪು ಹಿಡಿಯಲು ಸ್ವತಂತ್ರರಾಗಿದ್ದರು! ಯೇಸುವಿನ ಕುಟುಂಬ, ಆತನ ಶಿಷ್ಯರು, ಮತ್ತು ಆತನ ವೈರಿಗಳು ವೈಯಕ್ತಿಕವಾಗಿ ಆತನನ್ನು ಎದುರಿಸಿದರು. ಆತನ ದೀನತೆಗೆ ಇದು ಒಂದು ಕಾಣಿಕೆಯಾಗಿದೆ. ಯೇಸುವು ಪ್ರಾರ್ಥಿಸಲು ಸಮಯ ತೆಗೆದುಕೊಂಡದ್ದರಿಂದ ಆತನು ಯಶಸ್ವಿಯಾದನು.

ಮುಂಜಾನೆ ಇನ್ನೂ ಮೊಬ್ಬಿರುವಾಗಲೇ ಯೇಸುವು ಪ್ರಾರ್ಥಿಸುವುದಕ್ಕಾಗಿ ಎದ್ದನು (ಮಾರ್ಕ 1:35). ಆತನು ಜನರಿಗೆ ಸೇವೆ ಮಾಡುವ ಮೊದಲು ಆತನು ದೇವರನ್ನು ಸಂದರ್ಶಿಸಿದನು. ದಿನವೆಲ್ಲಾ ಪ್ರಾರ್ಥಿಸುವದರಲ್ಲಿ ನಡೆಯಿರಿ. ಪ್ರಾರ್ಥಿಸಲು ಬೇಗನೇ ಏಳಿರಿ. ದಿನದಲ್ಲಿ ಹೆಚ್ಚು ಕಾರ್ಯನಿರತರಾಗಬೇಕಿದ್ದಲ್ಲಿ, ಇನ್ನೂ ಹೆಚ್ಚು ಬೇಗನೇ ಏಳಿರಿ. ಪ್ರಾರ್ಥನೆಗಾಗಿ ಬೇಗನೇ ಏಳದಷ್ಟು ನೀವು ಮೈಗಳ್ಳರಾಗಿರುವಿರೋ? ಶಿಸ್ತಿನ ಕೊರತೆಯಿಂದ ಅನೇಕರು ಒಹಳಷ್ಟನ್ನು ಕಳೆದುಕೊಳ್ಳುತ್ತಾರೆ. ಯೇಸುವು ಪ್ರಾರ್ಥನೆ ಮಾಡಲಾರದಷ್ಟು ಎಂದೂ ಬಹಳ ಕಾರ್ಯನಿರತನಾಗಿರಲ್ಲಿ. ಪ್ರಾರ್ಥನೆಯು ಒಂದು ಸಮಯವನ್ನು ಒಂದು ಸ್ಥಳವನ್ನು, ಒಂದು ದಿನಚರಿಯನ್ನು ಕೇಳುತ್ತದೆ. ಪ್ರಾರ್ಥನೆಯು, ಯಾವುದೇ ಯೋಗ್ಯವಾದದ್ದರಂತೆ, ಕಠಿಣವಾದ ಕೆಲಸವಾಗಿದೆ - ಆದಾಗ್ಯೂ ಅದು ನಮ್ಮ ಆನಂದವೂ, ನಮ್ಮ ಉತ್ಸಾಹವೂ ಆಗಿದೆ.

ಯೇಸುವು ಊಟ ಮಾಡುವ ಮೊದಲು ಪ್ರಾರ್ಥಿಸಿದನು ಲೂಕ 24:13-35, ಶಿಲುಬೆಯ ವಾರಾಂತ್ಯದಲ್ಲಿ ಸೋತುಹೋದ ಶಿಷ್ಯರು ಎಮ್ಮಾಹುವಿಗೆ ನಡೆದು ಹೋಗುತ್ತಿದ್ದ ಮನೋಹರವಾದ ಕಥೆಯನ್ನು ನಮಗೆ ಹೇಳುತ್ತದೆ. ಯೇಸುವು ಪ್ರಾರ್ಥಿಸುವವರೆಗೆ ಅವರು ಆತನನ್ನು ಗುರುತಿಸಲಿಲ್ಲ (ಲೂಕ 24:30, 31). ಯೇಸುವು ಪ್ರಾರ್ಥಿಸಿದಾಗ ಆಶ್ಚರ್ಯಕರವಾದ ಸಂಗತಿಗಳು ಸಂಭವಿಸಿದವು! ಪರಲೋಕವು ತೆರೆಯಲ್ಪಟ್ಟಿತು,

ಮತ್ತು ದೇವರು ಯೇಸುವನ್ನು ಆತನ ಬಾಪ್ತಿಸ್ಮದಲ್ಲಿ ಗುರುತಿಸಿದನು (ಲೂಕ 3:21, 22)! ಯೇಸುವು ಪ್ರಾರ್ಥಿಸಿದನು ಮತ್ತು ಮೋಶೆ ಹಾಗೂ ಎಲೀಯರೊಂದಿಗೆ ರೂಪಾಂತರ ಹೊಂದಿದನು (ಲೂಕ 9:28-30). ಯೇಸುವು ಪ್ರಾರ್ಥಿಸಿದನು ಮತ್ತು ಒಬ್ಬ ದೇವದೂತನು ಆತನನ್ನು ಬಲಪಡಿಸಲಿಕ್ಕೆ ಬಂದನು (ಲೂಕ 22:43, 44). ಯೇಸುವು ಪ್ರಾರ್ಥಿಸಿದಾಗ ಸಂಗತಿಗಳು ಸಂಭವಿಸಿದವು! ಯೇಸುವು ಪ್ರಾರ್ಥಿಸಿದ್ದರಿಂದ ಲಾಜರನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು (ಯೋಹಾನ 11:41-43). ಯೇಸುವು ಪ್ರಾರ್ಥಿಸಿದನು ಮತ್ತು ಆಗ ಗುಡುಗಿತು (ಯೋಹಾನ 12:27-33). ಅನುದಿನದ ಆಹಾರಕ್ಕಾಗಿ ನಾವು ದೇವರನ್ನು ಬೇಡಿಕೊಂಡರೆ, ಅದಕ್ಕಾಗಿ ನಾವು ದೇವರಿಗೆ ಉಪಕಾರ ಹೇಳತಕ್ಕದ್ದು.

ಪ್ರಾರ್ಥನೆಯಲ್ಲಿ ನಮ್ಮ ಮಕ್ಕಳನ್ನು ತರಬೇತಿಪಡಿಸಲು ಮೇಜು ಅತ್ಯುತ್ತಮವಾದ ಸ್ಥಳವಾಗಿದೆ. ಮಲಗುವ ಸಮಯವೂ ನಮ್ಮ ಮಕ್ಕಳೊಂದಿಗೆ ಪ್ರಾರ್ಥನೆಯ ಜೀವನ ಅಸ್ತಿವಾರಹಾಕಲು ಒಂದು ದೊಡ್ಡ ಸಮಯವಾಗಿದೆ. ಯೇಸುವು ಪ್ರಾರ್ಥಿಸಿದನು. ನಾವು ಪ್ರಾರ್ಥಿಸತಕ್ಕದ್ದು. ನಾವು ನಮ್ಮ ಮಕ್ಕಳಿಗೆ ಪ್ರಾರ್ಥಿಸುವದನ್ನು ಕಲಿಯತಕ್ಕದ್ದು.

ಯೇಸು ರಾತ್ರಿಯೆಲ್ಲಾ ಪ್ರಾರ್ಥಿಸಿದನು (ಬಹುಶಃ ಅನೇಕಸಲ). ಅಪೊಸ್ತಲರನ್ನು ಆಯ್ಕೆಮಾಡುವ ಮೊದಲು ಯೇಸುವು ರಾತ್ರಿಯೆಲ್ಲಾ ಪ್ರಾರ್ಥಿಸಿದನು (ಲೂಕ 6:12). ರಾತ್ರಿಯಲ್ಲಿ ಪ್ರಾರ್ಥನೆ ಮಾಡುವುದು ನನಗೆ ಸುಲಭವಾಗಿತ್ತು. ಯಾಕೆ ಎಂಬುದು ನನಗೆ ನಿಜವಾಗಿ ತಿಳಿದಿರುವದಿಲ್ಲ. ಓನಿಯನ್ ಕ್ರೀಕದ ತೀರಗಳ ಮೇಲೆ ನನಗೆ ಒಂದು "ಮೆಚ್ಚಿಕೆಯ ದಿನ್ನೆ"ಯಿತ್ತು. ಈ ದಿನನಿತ್ಯದ ರೂಢಿಯನ್ನು ಸಮಯವು ಬದಲಾಯಿಸಿತು. ಈಗ ನಾನು ಪ್ರಾತಃಕ್ಕಾಲವನ್ನು ಮೆಚ್ಚಿಕೊಳ್ಳುತ್ತೇನೆ. ದೇವರೊಂದಿಗೆ ದಿನವನ್ನು ಪ್ರಾರಂಭಿಸುವದನ್ನು ಬಯಸುತ್ತೇನೆ.

ಸಾಮಾನ್ಯವಾಗಿ, ಯೇಸುವು ಒಬ್ಬನಾಗಿಯೇ ಪ್ರಾರ್ಥಿಸಿದನು! ಓದಿರಿ ಲೂಕ 5:16; 9:18; 22:41; ಮತ್ತಾಯ 14:23. "ಏಕಾಂತದಲ್ಲಿಯ ಪ್ರಾರ್ಥನೆಯನ್ನು" ಕುರಿತು ಕ್ರಿಸ್ತನು ಪ್ರಸಂಗಿಸಿದಂತೆ ರೂಢಿಸಿದನು. ಆತನು ಬೀದಿಯಲ್ಲಿ ಪ್ರದರ್ಶನ ಮಾಡುತ್ತ ಪ್ರಾರ್ಥಿಸಲಿಲ್ಲ! ಸಭಾಕೂಟದಲ್ಲಿಯ ಪ್ರಾರ್ಥನೆಯಲ್ಲಿಯೂ ಸಹ ಕೆಲವೊಂದು "ಪ್ರತ್ಯೇಕತೆ" ಇರುತ್ತದೆ. ಲೂಕ 9:18ರಲ್ಲಿ ಒಂದು ಕುತೂಹಲ ಭರಿತ ಸಂಗತಿ ಸಂಭವಿಸಿತು: "ಆತನು ಏಕಾಂತವಾಗಿ ಪ್ರಾರ್ಥನೆ ಮಾಡುತ್ತಿರುವಾಗ ಆತನ ಶಿಷ್ಯರು ಆತನ ಕೂಡ ಇದ್ದರು ..." ಇದು ಗುಂಪು ಪ್ರಾರ್ಥನೆಯಾಗಿರಲಿಲ್ಲ, ಮತ್ತು ಅದು ರಹಸ್ಯ ಪ್ರಾರ್ಥನೆಯಾಗಿರಲಿಲ್ಲ. ಆತನು ಬಯ್ದಿರೆಯಾಗಿ ಪ್ರಾರ್ಥಿಸುವಂತೆ ಅಪೊಸ್ತಲರೊಂದಿಗೆ ನೆಮ್ಮದಿಯುಳ್ಳವನಾಗಿದ್ದನೋ? ಇದು "ಮೌನ ಪ್ರಾರ್ಥನೆ" ಆಗಿತ್ತೋ? ಒಬ್ಬನು "ಮೌನವಾಗಿ" ಪ್ರಾರ್ಥಿಸಬಹುದೋ? ಒಂದು ಜನಸಮೂಹದಲ್ಲಿಯೂ ನಾವು ಪ್ರಾರ್ಥಿಸಬಹುದೋ? ಕೇಳುವಂಥ ಮಾತುಗಳು ಇರಲೇಬೇಕೋ? ಯೇಸುವು ಒಬ್ಬನಾಗಿಯೇ ಪ್ರಾರ್ಥಿಸಿದನು; ಯೇಸುವು ಇತರರೊಂದಿಗೂ ಪ್ರಾರ್ಥಿಸಿದನು. ಯೇಸುವು ಏಕಾಂತದಲ್ಲಿ ಮತ್ತು ಬಹಿರಂಗದಲ್ಲಿ ಪ್ರಾರ್ಥಿಸಿದನು.

## ಕಾರಣಗಳು

ಆತನು ಅಸಾಮಾನ್ಯವಾಗಿ ಕಾರ್ಯನಿರತನಾಗಿದ್ದಾಗ ಯೇಸುವು ಪ್ರಾರ್ಥಿಸಿದನು. ಆತನ ಉದಾಹರಣೆಯು ನಮ್ಮ ಸೋಲನ್ನು ಬಹಿರಂಗ ಪಡಿಸುತ್ತದೆ - ನಾವು ಪ್ರಾರ್ಥನೆ ಮಾಡಲಾಗದಷ್ಟು ಕಾರ್ಯನಿರತರಾಗುತ್ತೇವೆ. ಆತನ ಬಹಿರಂಗ ಪ್ರಸಿದ್ಧಿಯ ಉನ್ನತಿಯು, ಯೇಸುವು ಪ್ರತ್ಯೇಕವಾಗಿ ಹೋಗಿ ಪ್ರಾರ್ಥನೆ ಮಾಡುವದಾಗಿತ್ತು (ಲೂಕ

5:15, 16). ಪ್ರಸಿದ್ಧಿ, ಯಶಸ್ಸು ಮತ್ತು ಅಧಿಕಾರ ವ್ಯಸನಕರವಾದ ಶೋಧನೆಗಳಾಗಿವೆ. ಪ್ರಾರ್ಥನೆಯು ಸಮಯವನ್ನು ಉಳಿಸುವುದಾಗಿದೆ. ನಾವು ಹೆಚ್ಚು ಕಾರ್ಯನಿರತರಾದಲ್ಲಿ, ನಮಗೆ ಹೆಚ್ಚು ಪ್ರಾರ್ಥನೆಯ ಅಗತ್ಯತೆಯಿರುತ್ತದೆ. ದಣಿವು ಸಹ ನಮ್ಮ ಪ್ರಾರ್ಥನಾ ಜೀವಿತವನ್ನು ತಂಪುಗೊಳಿಸುತ್ತದೆ.

ವಿಶೇಷವಾದ ತೀರ್ಮಾನಗಳನ್ನು ಮಾಡುವ ಮೊದಲು, ಯೇಸುವು ಪ್ರಾರ್ಥಿಸಿದನು. ಪ್ರಾರ್ಥನೆಯ ಮೇಲೆ ಪ್ರಸಿದ್ಧವಾದ ಪುಸ್ತಕವು ಜಾರ್ಜ್ ಬುಟ್ರಿಕ್ ಅವರಿಂದ ಬರೆಯಲ್ಪಟ್ಟಿತು.[1] ಯೇಸುವಿನ ಪ್ರಾರ್ಥನಾ ಜೀವಿತದ ಮೇಲೆ ಶ್ರೇಷ್ಠವಾದ ವಿಷಯವು ಈ.ಬಿ. ಬೌಂಡ್ಸ್ ಅವರಿಂದ ಬರೆಯಲ್ಪಟ್ಟಿತು.[2] "ಆತನ ಜೀವಿತದ ದೊಡ್ಡ ಕಾಲಗಳು ಪ್ರಾರ್ಥನೆಯೊಂದಿಗೆ ಸೃಷ್ಟಿಸಲ್ಪಟ್ಟವು ಮತ್ತು ಕಿರೀಟ ಹೊಂದಿದವು" ಎಂದು ಅವನು ಗಮನಿಸಿದ್ದಾನೆ[3]. ಯೇಸುವು ತನ್ನ ಬಾಪ್ತಿಸ್ಮದಲ್ಲಿ ಪ್ರಾರ್ಥಿಸಿದನು (ಲೂಕ 3:21, 22). ಹನ್ನೆರಡು ಜನರನ್ನು ಆಯ್ದುಕೊಳ್ಳುವಾಗ ರಾತ್ರಿಯೆಲ್ಲಾ ಪ್ರಾರ್ಥಿಸಿದನು (ಲೂಕ 6:12-16). ಆತನು ರೂಪಾಂತರ ಬೆಟ್ಟದ ಮೇಲೆ ಪ್ರಾರ್ಥಿಸಿದನು (ಲೂಕ 9:28-36). ಶಿಲುಬೆಯ ಮೊದಲು ಆತನು ಗೆತ್ಸೇಮನೆಯಲ್ಲಿ ಪ್ರಾರ್ಥಿಸಿದನು (ಮತ್ತಾಯ 26:36-46). *ಯೇಸುವು ತನ್ನ ಜೀವಿತಗಳಲ್ಲಿ ಮೈಲುಗಲ್ಲುಗಳ ಮೊದಲು, ಅವುಗಳಲ್ಲಿ ಮತ್ತು ಅವುಗಳ ನಂತರದ ಪ್ರಾರ್ಥಿಸಿದನು.* ನಮ್ಮ ಸ್ಮರಣೀಯವಾದ ತೀರ್ಮಾನಗಳು ಪ್ರಾರ್ಥನೆಯಿಂದ ಹೊರಗೆ ಬರಬೇಕು.

ಸಂದಿಗ್ಧ ಪರಿಸ್ಥಿತಿಗಳ ಸಮಯಗಳಲ್ಲಿ ಯೇಸುವು ಪ್ರಾರ್ಥಿಸಿದನು. ಆತನೆಂದೂ ದೆಸೆಗೆಡಲಿಲ್ಲ. ಆತನು ತನ್ನನ್ನು ಜನರು ರಾಜಕೀಯ ಅರಸನನ್ನಾಗಿ ಮಾಡಲು ಬಯಸಿದ್ದಾರೆಂಬುದನ್ನು ತಿಳಿದುಕೊಂಡಾಗ, ಆತನು ಪ್ರಾರ್ಥಿಸುವದಕ್ಕೆ ಹೊರಟು ಹೋದನು (ಯೋಹಾನ 6:15). ತನ್ನ ಶಿಷ್ಯರು ತನ್ನನ್ನು ಬಿಟ್ಟು ಓಡಿಹೋಗುವ ಮೊದಲು ಆತನು ಅವರಿಗಾಗಿ ಪ್ರಾರ್ಥಿಸಿದನು. ಆತನು ಗೆತ್ಸೇಮನೆಯಲ್ಲಿ ಪ್ರಾರ್ಥಿಸಿದನು. ಶಿಲುಬೆಯ ಮೇಲೆ ಆತನು ಪ್ರಾರ್ಥಿಸಿದನು.

ನಿರ್ಣಾಯಕ ಘಟನೆಗಳನ್ನನುಸರಿಸಿ, ಯೇಸುವು ಪ್ರಾರ್ಥನೆ ಮಾಡಿದನು. ನಮ್ಮ ಅಗತ್ಯತೆಗಳ ಸಮಯದಲ್ಲಿ ಸಹಾಯಕ್ಕಾಗಿ ನಾವು ಪ್ರಾರ್ಥಿಸುತ್ತೇವೆ. ದೇವರ ಪರಿಹಾರಗಳಿಗಾಗಿ ನಾವು ಆತನಿಗೆ ಉಪಕಾರ ಹೇಳುವ ಅಗತ್ಯತೆಯಿದೆ. ಇಲ್ಲದಿದ್ದರೆ, ಯಶಸ್ಸು ನಮ್ಮ ಕುತ್ತಿಗೆ ಹಿಚುಕುತ್ತದೆ. "ದೇವರ ಜಯಗಳಿಗಾಗಿ" ಕೃತಜ್ಞತೆಗಳನ್ನು ಸಲ್ಲಿಸುವುದು ನಮ್ಮನ್ನು ದೀನರನ್ನಾಗಿ ಇಡುತ್ತದೆ.

ಆತನು ಮರಣವನ್ನು ಎದುರಿಸುತ್ತಿದ್ದಾಗ, ಯೇಸುವು ಪ್ರಾರ್ಥಿಸಿದನು. ಇಬ್ರಿಯ 5:7 ಆಕರ್ಷಿಸುತ್ತದೆ: "ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು" (1) ಯೇಸುವು ತನ್ನ ಜೀವನಕ್ಕಾಗಿ ಕೂಗುತ್ತಾ ಕಣ್ಣೀರು ಸುರಿಸಿದನು. (2) ದೇವರು ಅವನನ್ನು ರಕ್ಷಿಸಿದನು. (3) ದೇವರು ಆತನನ್ನು ಕೇಳಿದನು, ಆದಾಗ್ಯೂ ದೇವರು "ಇಲ್ಲ!" ಎಂದು ಉತ್ತರಕೊಟ್ಟನು! ಯೇಸುವು ದೇವದೂತರ ಗುಣಗಳನ್ನು ಕರೆಯಬಹುದಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ (ಮತ್ತಾಯ 26:53). ಆತನು ಶಿಲುಬೆಯನ್ನು ತಂದೆಯ ಜೋಪಾಸನೆಯಲ್ಲಿ ಬಿಟ್ಟನು!

## ಸಹಕಾರಿಯಾದ ಸಂಗತಿಗಳು

(1) *ಯೇಸುವು ಅಧೀನತೆಯುಳ್ಳವನಾಗಿದ್ದನು.* ಅಧೀನತೆಯು ಅಸ್ತಿವಾರವಾದದ್ದೂ

ನಿರ್ಣಾಯಕವಾದದ್ದೂ ಆಗಿತ್ತು. ಇಬ್ರಿಯ 5:7 ಮತ್ತು ಲೂಕ 22:40-46 ನೋಡಿರಿ. ಯೋಹಾನನು ಶಿಲುಬೆಯನ್ನು ಕೇವಲ "ತಾಸು" ಎಂದು ಉಲ್ಲೇಖಿಸಿದನು. ಯೋಹನನಲ್ಲಿ ಯೇಸುವು "ತಾಸಿನ" ಮೇಲೆ ಕೇಂದ್ರೀಕರಿಸಿ ತನ್ನ ಮಾರ್ಗವನ್ನು ಸಾಧಿಸುವದನ್ನು ನಾವು ನೋಡುತ್ತೇವೆ. "ತಾಸು" ಬಂದಿದೆ. ಈಗ "ತಾಸು" ಅವನ ಜಯವಾಗಿತ್ತು. ಯೇಸುವು ಬಲಿಪಶುವಾಗಿರಲಿಲ್ಲ; ಆತನು ಜಯಶಾಲಿಯಾಗಿದ್ದಾನೆ. ಆತನು ಪ್ರಾರ್ಥಿಸುವ ಮೊದಲು ದೇವರ ಉತ್ತರವನ್ನು ತಿಳಿದಿದ್ದನು: "ಇಲ್ಲ, ಮಗನೇ, ಇಲ್ಲ!" ಇನ್ನೂ ಆತನು ಪ್ರಾರ್ಥಿಸಿದನು. "ಈ ಪಾತ್ರೆಯನ್ನು ತೆಗೆದು ಹಾಕು" ಮೂರು ಸಲ ಆತನು ಪ್ರಾರ್ಥಿಸಿದನು: ಅದೇ ಉತ್ತರ ಬೆವರು ರಕ್ತದ ಹನಿಗಳೋಪಾದಿಯಲ್ಲಿ ಬಿತ್ತು! ಯೇಸುವು ಗೆತ್ಸೇಮನೆಯಲ್ಲಿ ಪ್ರಾರ್ಥಿಸಿದಂತೆ ಬೇರೆ ಯಾರೂ ಪ್ರಾರ್ಥಿಸುವದಿಲ್ಲ. ಮೂಲ ತತ್ವವು ಯಾವುದು? "ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ನೆರವೇರಲಿ."

*ಮೊದಲು ಪ್ರಾರ್ಥಿಸಿರಿ!* ಯಾಕೆ? *ಅಧೀನತೆ!* ನಾವು ಅಧೀನರಾಗುವ ವರೆಗೆ ದೇವರು ನಮ್ಮನ್ನು ಉಪಯೋಗಿಸುವದಿಲ್ಲ. ನಮ್ಮ ಪ್ರಾರ್ಥನೆಗಳು ಸಮರ್ಪಣೆಯ, ತ್ಯಜಿಸುವಿಕೆಯ ಮತ್ತು ಒಪ್ಪಿಸಿಕೊಡುವಿಕೆಯ ಪ್ರಾರ್ಥನೆಗಳಾಗಿರತಕ್ಕದ್ದು. ತ್ಯಜಿಸುವಿಕೆಯು ನಿರೀಕ್ಷೆಯಾಗಿದೆ, ಮರಣಾಂತಿಕ ತ್ಯಜಿಸುವಿಕೆಯಾಗಿರುವದಿಲ್ಲ. ತ್ಯಜಿಸುವಿಕೆಯು ಮಹಾ ಆಶೀರ್ವಾದವನ್ನು - ಮಾನವ ಚಿತ್ತದ ಶಿಲುಬೆಗೆ ಹಾಕುವಿಕೆಯನ್ನು ತರುತ್ತದೆ. "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ ..." (ಗಲಾತ್ಯ 2:20) ಎಂದು ಪೌಲನು ಹೇಳಿದನು. ಅಲ್ಲಿ ತ್ಯಜಿಸುವಿಕೆಯಿದೆ; ಅಲ್ಲಿ ವೈಯಕ್ತಿಕ ಮರಣವಿದೆ. "ನಾನು ದಿನಾಲೂ ಸಾಯುತ್ತಿದ್ದೇನೆ" (1 ಕೊರಿಂಥ 15:31) ಎಂದೂ ಪೌಲನು ಹೇಳಿದನು. ತ್ಯಜಿಸುವಿಕೆಯು "ಸ್ವಾರ್ಥದ" ಪಾಪಗಳಿಂದ ನಮ್ಮನ್ನು ಬಿಡುಗಡೆ ಮಾಡುತ್ತದೆ: ಸ್ವಯಂ ತೃಪ್ತಿ, ಸ್ವಗೌರವ, ಸ್ವ-ಕನಿಕರ, ಸ್ವಯಂ ಮೋಸ, ಸ್ವಯಂ ತಿರಸ್ಕಾರ ಇತ್ಯಾದಿಗಳು. ದೇವರು ಏನೂ ಇಲ್ಲದ್ದರೊಳಗಿಂದ ಮಾತ್ರವೇ ಸೃಷ್ಟಿಸುತ್ತಾನೆ. ದೇವರು ಉಪಯೋಗಿಸುವ ಪ್ರತಿಯೊಂದು ಇಲ್ಲವಾದ ದಕ್ಕೆ ಇಳಿಸಲ್ಪಡಬೇಕು. ಇದು ಚಿತ್ತವನ್ನು ಶಿಲುಬೆಗೆ ಹಾಕುವುದಾಗಿದೆ, ಚಿತ್ತವನ್ನು ನಾಶಪಡಿಸುವದಾಗಿರುವದಿಲ್ಲ. ಪರಿಶುದ್ಧ ಬರಹಗಳಲ್ಲಿ ಶಿಲುಬೆಗೆ ಹಾಕಲ್ಪಡುವದು ಯಾವಾಗಲೂ ಪುನರುತ್ಥಾನದೊಂದಿಗೆ ಹೊಂದಿಸಲ್ಪಟ್ಟಿದೆ, ಸ್ವಾರ್ಥವನ್ನು ಬಲಿದು ಮಾಡಿಕೊಳ್ಳುವ ಪ್ರಾರ್ಥನೆಯನ್ನು, ಸಮರ್ಪಣೆಯ ಪ್ರಾರ್ಥನೆಯನ್ನು, ತ್ಯಜಿಸುವಿಕೆಯ ಪ್ರಾರ್ಥನೆಯನ್ನು, ಬಿಡುಗಡೆಯ ಪ್ರಾರ್ಥನೆಯನ್ನು, ಆಮೇಲೆ ಪುನರುತ್ಥಾನದ ಪ್ರಾರ್ಥನೆಯನ್ನು ಪ್ರಾರ್ಥಿಸುತ್ತೇವೆ. ಯೇಸುವು ರೊಟ್ಟಿಗಾಗಿ ದೇವರನ್ನು ನಂಬಿದ್ದನು (ಮತ್ತಾಯ 4:1-4). ಪುನರುತ್ಥಾನಕ್ಕಾಗಿ ಆತನು ದೇವರನ್ನು ನಂಬಿದ್ದನು.

(2) *ಯೇಸುವು ತನಗಾಗಿ ಪ್ರಾರ್ಥಿಸಿದನು.* ತಾವು ಅಂಥ ಪ್ರಾರ್ಥನೆಗಳ ಮೇಲೆ ಇರು ವೆವೆಂದು ಯೋಚಿಸುವ ಕೆಲವು "ಶ್ರೇಷ್ಠ ... ಭಕ್ತಿವಂತರನ್ನು" ತೊಂದರೆಪಡಿಸುತ್ತದೆ. ಯೋ ಹಾನ 17ನ್ನು ಸಮೀಪದಿಂದ ಓದಿರಿ. ಯೇಸುವು ಮೊದಲು ತನಗಾಗಿ ಪ್ರಾರ್ಥಿಸಿದನು! ಆತನು ತನ್ನ ಮರಣದ ಮುಖಾಂತರ ತನ್ನ ಮಹಿಮೆಗಾಗಿ ಪ್ರಾರ್ಥಿಸಿದನು. ಆತನ ಪ್ರಾರ್ಥನೆಯಲ್ಲಿ ವಿರೋಧಾಭಾಸವಿರುವದಿಲ್ಲ. "ಪ್ರಾರ್ಥನೆಯು ಆತನ ಬಲದ ರಹಸ್ಯ ವಾಗಿತ್ತು, ಆತನ ಜೀವನದ ನಿಯಮವಾಗಿತ್ತು, ಆತನ ಶ್ರಮೆಯ ಪ್ರೇರಣೆಯಾಗಿತ್ತು ಮತ್ತು ಆತನ ಐಶ್ವರ್ಯದ ಮೂಲವಾಗಿತ್ತು, ಆತನ ಆನಂತವಾಗಿತ್ತು, ಆತನ ಅನ್ಯೋನ್ಯತೆ ಮತ್ತು ಆತನ ಬಲವಾಗಿತ್ತು" ಎಂದು ಈ. ಎಮ್ ಬೌಂಡ್ಸ್ ಹೇಳಿ ದ್ದಾರೆ.[4] ಅಧೀನರಾದ ಸಹೋದರರು ತಮ್ಮಷ್ಟಕ್ಕೆ ತಾವೇ ಪ್ರಾರ್ಥಿಸುವರು!

(3) *ಯೇಸುವು ಇತರರಿಗಾಗಿ ಪ್ರಾರ್ಥಿಸಿದನು.* ಯೋಹಾನ 17ನ್ನು ಪುನಃ

ಓದಿರಿ. ಆತನು ಅಪೊಸ್ತಲರಿಗಾಗಿ ಪ್ರಾರ್ಥಿಸಿದನು; ಆತನು ಸಭೆಗಾಗಿ ಪ್ರಾರ್ಥಿಸಿದನು; ಆತನು ನಮಗಾಗಿ ಪ್ರಾರ್ಥಿಸಿದನು. ಆತನು ತನ್ನ ವೈರಿಗಳಿಗಾಗಿಯೂ ಪ್ರಾರ್ಥಿಸಿದನು (ಲೂಕ 23:34; ಮತ್ತಾಯ 5:44). ಶಿಲುಬೆಯ ಬಳಿಯಲ್ಲಿ ಆತನು ತನ್ನ ತಾಯಿಗಾಗಿ ಪ್ರಾರ್ಥಿಸಿದನು, ಆಕೆಯ ಜೋಪಾಸನೆ ಮಾಡಬೇಕೆಂದು ಯೋಹಾನನಿಗೆ ಆಜ್ಞಾಪಿಸಿದನು. ಆತನು ಪರಿಶುದ್ಧಾತ್ಮನಿಗಾಗಿ ಪ್ರಾರ್ಥಿಸಿದನು (ಯೋಹಾನ 14:16).

(4) *ಉಪಕಾರದೊಂದಿಗೆ ಯೇಸು ಪ್ರಾರ್ಥಿಸಿದನು.* ನಾವು ದೇವರನ್ನು ನೋಡುವಾಗ, ನಾವು ಮೌನದಲ್ಲಿ ಸ್ಥಂಭಿತರಾಗುತ್ತೇವೆ ಮತ್ತು ಕೃತಜ್ಞತೆಯಿಂದ ಆಶ್ಚರ್ಯಚಕಿತರಾಗುತ್ತೇವೆ. ಆಹಾರಕ್ಕಾಗಿ, ಯಶಸ್ವೀ ಸೇವೆಗಾಗಿ, ಲಾಜರನನ್ನು ಎಬ್ಬಿಸಿದ್ದಕ್ಕಾಗಿ ಯೇಸುವು ದೇವರಿಗೆ ಕೃತಜ್ಞತೆ ಸಲ್ಲಿಸಿದನು. ಆಸಕ್ತಿಯಿಂದ ಆತನು ಪ್ರಾರ್ಥಿಸಿದನು. ಆತನ ಬೆವರು ರಕ್ತದ ಹನಿಯಂತೆ ಸುರಿಯಿತು. ಯೇಸುವು "ಪ್ರಾರ್ಥಿಸುವ ಕ್ರಿಸ್ತ"ನಾಗಿದ್ದಾನೆ.

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬಿಕೆ ಇಡುವದಿಲ್ಲ.***
***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

---
ಟಿಪ್ಪಣಿಗಳು

[1]George A. Buttrick, *Prayer* (New York: Abingdon Press, 1942). [2]E. M. Bounds, *The Reality of Prayer* (Grand Rapids, Mich.: Baker Book House, 1924). [3]Ibid., 70. [4]Ibid., 73.

© 2009 Truth for Today